doc-574
T.P-4

Regd No B G 182 | ಗೋಮಾತಾಕೀ ಜೈ (ದಸರಾ ವಿಶೇಷ) Monthly Jai Go Mata | October 1972 ಅಕ್ಟೋಬರ್

ಗೋರಕ್ಷಣಕ್ಕೆ ಲೇಖನ ಕೊಡುತ್ತಿರುವವರಿಗೆ, ನೆರವು (ಡೊನೇಷನ್) ನೀಡುತ್ತಿರುವವರಿಗೆ, ಪ್ರಚಾರಮಾಡುತ್ತಿರುವವರಿಗೆ ವಂದನೆಗಳು

ಅನೇಕ ಪ್ರತಿಗಳು ಉಚಿತವಾಗಿ ಹಂಚಲಾಗುತ್ತಿದೆ

ವಾರ್ಷಿಕಚಂದಾ ಅಂಚೆಮೂಲ್ಯ 80ಪೈಸೆ

ವಿನಂತಿ– ಸಕಲರೀತಿಯಲ್ಲೂ ನೆರವುನೀಡಿ

ಗೋರಕ್ಷಣ

GORAKSHANA

Office– 1067 Chamarajapuram. Mysore 4

Please help in every way

This Humaniterian

– Propaganda Paper –

Many Papers Distributed Free

ಗೋರಕ್ಷಣಾ, ಅಹಿಂಸಾ ಪ್ರಚಾರ ಪತ್ರಿಕೆ

ದೇಶದಾದ್ಯಂತ ಗೋವಧೆ ಕೂಡಲೆ ನಿಲ್ಲಲಿ

ವರ್ಷ 23 rd Year | ಸಂಪಾದಕರು : ಧರ್ಮಪ್ರಚಾರನಿರತ ಎಂ.ಎಸ್. ಕೃಷ್ಣರಾವ್ | ಬಿಡಿ ಪ್ರತಿ 5 ಪೈಸೆ

Cow Slaughter should be banned Immediately

Kannada version of the A ticle– " Were cow-slaughter, meat-sacrifice and meat-eating prevalent in Vedic times ? " – From " A Review of Beef in Ancient India " Compiled by Syt J. Dalmiaji

ಗೋಹತ್ಯ, ಪ್ರಾಣಿಬಲಿ ಮತ್ತು ಮಾಂಸಾಹಾರ ವೇದಕಾಲದಲ್ಲಿ ರೂಢಿಯಲ್ಲಿತ್ತೆ ?

ಸ್ಥಿರ ಪ್ರಚಾರದ್ದಿಂದ, ವೇದ ಯುಗದಲ್ಲಿ ವಧೆಯು ಯಜ್ಞದ ಒಂದು ಭಾಗವಾಗಿತ್ತೆಂದೂ, ಗೋವುಗಳೂ ಹತ್ಯಮಾಡಲ್ಪಡುತ್ತಿದ್ದವೆಂದೂ, ಗೋಮಾಂಸ ಮತ್ತು ಇತರ ವಿಧದ ಹೂಂಸಗಳು ಸಾಧಾರಣವಾಗಿ ತಿನ್ನಲಾಗುತ್ತಿತ್ತೆಂದೂ, ವಧೆಯ ಪೂರ್ಣ ಪ್ರತಿಬಂಧಕವು ಬೌದ್ಧ ಮತ್ತು ಜೈನರ ಕಾಲಡಲ್ಲಿ ಜಾರಿಗೆ ಬಂದಿತೆಂದೂ, ಹಲವು ಜನರ ಮನಸ್ಸಿಗೆ ಬೇಜಾರು ಹುಟ್ಟುವಷ್ಟು ತುರುಕಲಾಯಿತು. ಬೌದ್ಧ ಮತ್ತು ಜೈನರ ಕಾಲಕ್ಕೆ ಮುಂಚೆ, ತಪ್ಪು ತಿಳುವಳಿಕೆಯಿಂದ, ಹತ್ಯೆಯು ಕೆಲವು ಜನರಲ್ಲಿ ರೂಢಿಯಲ್ಲಿದ್ದು ನಿಜವಾದರೂ, ವೇದಯುಗದಲ್ಲಿ ಯಜ್ಞದಲ್ಲಿ ವಧೆ ಇದ್ದಿತೆಂಬುವುದೂ ಅಥವಾ ಮಾಂಸ ಭಕ್ಷಣೆ ಇದ್ದಿತೆಂಬುವುದೂ ಪೂರ್ತಾ ಸುಳ್ಳು. ಗೋವು ಅಘ್ನ್ಯ (ಕೊಲ್ಲಲ್ಪಡತಕ್ಕದ್ದಲ್ಲ) ವೆಂದು ವೇದಗಳಲ್ಲಿರುವುದೆಂದೂ, ಆದರೆ ಇತರ ಪ್ರಾಣಿಗಳ-ವಧೆಗೆ ಪ್ರತಿಬಂಧಕವಿಲ್ಲದಿದ್ದುದರಿಂದ ಯಜ್ಞಗಳಲ್ಲಿ ಪ್ರಾಣಿವಧೆ ನಡೆಯುತ್ತಿತ್ತೆಂದು ಕೆಲವರು ತಿಳಿದಿರುವರು– ಈ ಭಾವನೆಯು ಕೂಡಾ ತಪ್ಪು.

ಗೋವಿಗೆ ವೇದ ಕಾಲದಲ್ಲಿ ಕೊಡಲಾಗುತ್ತಿದ್ದ ಅತೀವ ಗೌರವವನ್ನು, ಕೈ ॥ ಪಂ॥ ಶ್ರೀಪಾದ ದಾಮೋದರ ಸತವಲೇಕರ್‌ರವರು ತಮ್ಮ " ಗೋಜ್ಞಾನಕೋಶ " ದಲ್ಲೂ, ಪಂಡಿತ್ಯದೀನಾನಾಥ ಶರ್ಮರು ತಮ್ಮ " ಶ್ರೀ ಸನಾತನ ಧಾರಲೋಕ " ದಲ್ಲೂ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿಯವರು ತಮ್ಮ ' ವೇದೋಕ್ತ ಯಜ್ಞಾರ್ಥ ಪಶ್ವಾದಿಹಿಂಸಾ ' ದಲ್ಲೂ ಸ್ಪಷ್ಟವಾಗಿ ವಿವರಿಸಿದ್ದಾರೆ. ವೇದ ಕಾಲದಲ್ಲಿ ಗೋಹತ್ಯೆಯಾಗಲೀ, ಗೋಮಾಂಸ ಭಕ್ಷಣೆಯಾಗಲೀ, ಇತರ ಪ್ರಾಣಿಗಳ ವಧೆಯಾಗಲೀ, ಅವುಗಳ ಮಾಂಸ ಸೇವನೆಯಾಗಲೀ, ಇರಲಿಲ್ಲವೆಂಬುದನ್ನು ಸ್ಪಷ್ಟವಾಗಿ ಸಿದ್ಧಿಪಡಿಸುವ ಕೆಲವು ಸಾರಾಂಶಗಳನ್ನು ಇಲ್ಲಿ ಉದಾಹರಿಸಿದೆ; ಇನ್ನೂ ಹೆಚ್ಚು ವಿವರಗಳನ್ನು ತಿಳಿಯಬಿಚ್ಛಿಸುವವರು, ಮೇಲೆ ತಿಳಿಸಿದ ಮೂರು ಗ್ರಂಥಗಳನ್ನು ವ್ಯಾಸಂಗ ಮಾಡಬೇಕು.

ಗೋವು ವಧಿಸಲ್ಪಡತಕ್ಕದ್ದಲ್ಲ

ವೇದಮಂತ್ರಗಳ ಜಾಗರೂಕತೆಯ ಪರ್ಯಾಲೋಚನೆಯು, ಗೋವು ಕೊಲ್ಲಲ್ಪಡತಕ್ಕುದಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. ಇದು ವೇದಮಂತ್ರಗಳಲ್ಲಿ ಅನೇಕ ರೀತಿಗಳಲ್ಲಿ ತಿಳಿಸಲಾಗಿದೆ ವೇದಗಳಲ್ಲಿ " ಒಂದು ಗೋವು ಮತ್ತು ಗೂಳಿ" ಯ ಹೆಸರೇ ಅಘ್ನ್ಯೆ ; ಕೊಲ್ಲಲ್ಪಡತಕ್ಕದ್ದಲ್ಲವೆಂದು ಅದರ ಅರ್ಥ. ಯಾತರ ಹೆಸರೇ ಅಘ್ನ್ಯೆ ವಾಗಿರುವಾಗ, ಅದನ್ನು ಕತ್ತರಿಸುವುದಾಗಲೀ ವಧೆ ಮಾಡುವುದಾಗಲೀ ಅಸಾಧ್ಯವು, ವೇದಪದಗಳು ಅರ್ಥಗರ್ಭಿತವು ; ಅರ್ಥಗರ್ಭಿತವಾದವು ಮತ್ತು ಸಹಜವಾಗಿ ಸಮಂಜಸವು. ಆದುದರಿಂದ, ಯಾತರ ಹೆಸರೇ ಅಘ್ನ್ಯೆ, ಕೊಲ್ಲಲ್ಪಡತಕ್ಕದ್ದಲ್ಲವಾಗಿರುವಾಗ, ಅವುಗಳ ವಧೆಯು ವೇದಕಾಲದಲ್ಲಿ ಅಸಾಧ್ಯವು ; ಮತ್ತು ವಧೆಮಾಡದೆ ಗೋಮಾಂಸವನ್ನು ಹವನದಲ್ಲಿ ಅರ್ಪಿಸುವುದು ಪೂರ್ತಾ ಅಸಾಧ್ಯವು ಗೋವಧೆ ಮತ್ತು ಗೋಮೇಧದಲ್ಲಿ ಗೋಮಾಂಸವನ್ನು ಅರ್ಪಿಸುವುದು ನಿರಾಧಾರ ಕಲ್ಪನೆಗಳು.

ಗೋ ಪದಕ್ಕೆ, ಹಸು, ಅದರ ಹಾಲು. ಅದರ ಬೆಣ್ಣೆ, ಅದರ ಮಜ್ಜಿಗೆ, ಅದರ ತುಪ್ಪ, ಅದರ ಮೂತ್ರ. ಅದರ ಸೆಗಣಿ, ಅದರ ತೊಗಲು, ಅದರ ಕೂದಲು, ಅದರ ಮೂಳೆ ಇತ್ಯಾದಿ ಹಲವು ಅರ್ಥಗಳಿವೆ. ವೇದದಲ್ಲಿ ಇದನ್ನು ಮುಖ್ಯವಾಗಿ "ಹಾಲು" ಮತ್ತು " ತುಪ್ಪ ' ದ ಅರ್ಥದಲ್ಲಿ ಉಪಯೋಗಿಸಲಾಗಿದೆ. ಇದನ್ನು ವಿಶೇಷವಾಗಿ ಮನಸ್ಸಿನಲ್ಲಿಟ್ಟುಕೊಳ್ಳಬೇಕು [ಮುಂದುವರಿಯುವುದು

ತ್ಯಾಗಸ್ವರೂಪಿಣಿ

★

ಜಯಶ್ರೀ ಮಂಗಲೆ ಗೋವಿನ ದರ್ಶನ
ಪಾವನವೆಂಬುವ ಭಾವನೆಯು
ಭಾರತ ಪುತ್ರರ ಮನದಲಿ ಜಿನುಗಲು
ಜೀವಿತಕಾಗಲೆ ಸಫಲತೆಯು ॥ 1 ॥

ಸಂಧ್ಯಾರಾಗದ ಹೊನಲಲಿ ತೊಯ್ಯುತ
ದೊಡ್ಡಿಯ ಸೇರಿತು ಗೋಮಂದೆ
ನೊರೆನೊರೆ ಹಾಲಿನ ಚಿಲುಮೆ ಚಿಮ್ಮುತ
ಹಾಲ್ದೊಡದುಂಬಿತು ಕಣ್ಣಂದೆ ॥2॥

ಜೀವನ ಸತ್ಯವನುಣ್ಣಲು ದೇಶದಿ
ಭದ್ರ ಸಮಾಜದ ಸಂಘಟನೆ
ಗೋವಿನ ಹಸ್ಸೋದ್ಗಾರದ ಪಥದಿ
ಸುಂದರ ಬಾಳಿನ ಸಂಚಲನೆ ॥ 3॥

ಹೃದಯ ಭಕ್ತಿಯ ಭಾವಸ್ಪಂದನ
ದೇಶೋದ್ಧಾರದ ಸೂಚನೆಯು
ಶ್ರೀ ಗೋಮಾತೆಯ ರಕ್ಷಣೆಯಿಂದಲಿ
ಸಂಕಟ ಶಾಪ ವಿಮೋಚನೆಯು ॥4॥

ಸ್ನೇಹ, ತ್ಯಾಗ ಬುನಾದಿಯು ಮೇಲೇ
ನಿಂತಿದೆ ಭಾರತ ಸಂಸ್ಕೃತಿಯು
ತ್ಯಾಗ ಸ್ವರೂಪವೇ ಗೋವಾಗಿಹುದು
ಗೋಸಂರಕ್ಷಣೆ ಸುಸಂಸ್ಕೃತಿಯು ॥5॥

— ವಜ್ರಳ್ಳಿ ಗಣಪತಿಶರ್ಮಾ

ಅತಿ ಚಿಕ್ಕ ಕಾದುರೆಗಳ ಕ್ಷೇತ್ರ

ಅಮೇರಿಕಾದ ಗಟ್ಟಿಸ್ಬರ್ಗ್‌ಗೆ 3 ಮೈಲಿ ದೂರದಲ್ಲಿ ವಿಶ್ವದ ಅತಿ ಚಿಕ್ಕ ಕಾದುರೆಗಳ ಕ್ಷೇತ್ರವಿದ್ದು, ಅದನ್ನು ಜೀವಮಾನದಲ್ಲಿ ಹಡಗಿನ ಕೆಲಸದಲ್ಲಿದ್ದ ಮೂವರು ನೋಡಿಕೊಳ್ಳುತ್ತಾರೆ.

ಸಸ್ಯಾಹಾರ

ವಿಶ್ವವು ಸಸ್ಯಾಹಾರದ ಕಡೆ ಹೆಚ್ಚಿಚ್ಚು ಗಮನ ಕೊಡುತ್ತಿದೆನ್ನಲಾಗುತ್ತಿದೆ; ಸಸ್ಯಗಳ ಸಂಬಂಧದ ಹಸರು ಕ್ರಾಂತಿಯಲ್ಲಿ ಆಹಾರದಲ್ಲಿಯ ಪೋಷಣಾಂಶ ಹೆಚ್ಚುತ್ತಿರುವುದು ಕಂಡುಬಂದಿದೆ.

ದಸರಾ

ದಸರಾದಲ್ಲಿ ಮೆರವಣಿಗೆ ದರ್ಬಾರು ಇಲ್ಲದಿದ್ದರೂ, ರಾಜ್ಯದಲ್ಲಿ ಅನೇಕಕಡೆ ಅಭಾವ ಪರಿಸ್ಥಿತಿಗಾಗಿ ಮಿತವ್ಯಯ ಅನುಸರಿಸಲಾಗುತ್ತಿದ್ದರೂ, ಈನ ಸರಕಾರವು ದಸರಾ, ಆಕರ್ಷಣೀಯವಾಗಿರುವಂತೆ, ವಸ್ತುಪ್ರದರ್ಶನ ಮತ್ತು ಕೈಗಾರಿಕಾ ಮೇಳ, ಜಲನ ಚಿತ್ರೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಕಾರಂಜಿಯಲ್ಲಿ ತೆಪ್ಪೋತ್ಸವ ಮುಂತಾದವುಗಳನ್ನು ಮೈಸೂರು ನಗರದಲ್ಲಿ ಏರ್ಪಡಿಸಿದುದು ಸ್ತುತ್ಯಾರ್ಹವು – ರಾಜ್ಯದ ಅನೇಕ ಕಡೆ ನಾಡಹಬ್ಬವಾಗಿ ಆಚರಿಸಲಾಯಿತು.

" ಅಹಿಂಸಾ " ವ್ಯಾಸಂಗ

ನವದೆಹಲಿ— ಕೆಲವು ವಿಶ್ವವಿದ್ಯಾನಿಲಯಗಳು ಅಹಿಂಸಾ ವ್ಯಾಸಂಗ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ವಿಶ್ವವಿದ್ಯಾನಿಲಯಗಳ ಗ್ರಾಂಟ್ಸ್ ಕಮಿಷನ್ ಅಧ್ಯಕ್ಷರು ಇಚ್ಛೆ ಪಟ್ಟಿದ್ದಾರೆ.

○

ಫ್ಯೂಜಿ ಪರ್ವತದ ತಪ್ಪಲಲ್ಲಿ ಮೃಗಶಾಲೆ

ಜಪಾನಿನಲ್ಲಿನ-ಒಂದು ವ್ಯಾಪಾರ ಹಂಗಡವು 3776 ಮಿಾಟರುಗಳ ಎತ್ತರದ ಫ್ಯೂಜಿ ಪರ್ವತ ತಪ್ಪಲಲ್ಲಿ ಒಂದು ಮೃಗಶಾಲೆಯನ್ನು ನಿರ್ಮಿಸಲು ಯೋಜಿಸಿದೆ. ಆಫ್ರಿಕಾದಲ್ಲಿನ ಅನೇಕ ಪ್ರಾಣಿಗಳನ್ನು ಸಂಗ್ರಹಿಸಿ ಇಲ್ಲಿಗೆ ತರಲಾಗುವುದು. ಇದಕ್ಕೆ 7 ಲಕ್ಷ ಚದರು ಮಿಾಟರುಗಳ ವಿಸ್ತಾರದ ಸ್ಥಳ ಬೇಕಾಗುವುದು 1300 ಆಫ್ರಿಕದ ವಿವಿಧ ಪ್ರಾಣಿಗಳನ್ನು ಇಲ್ಲಿ ಸಂಗ್ರಹಿಸುವರು. 200 ಸಿಂಹಗಳೂ, 10 ಆನೆಗಳೂ 8 ಜಿರಾಫೆಗಳೂ ಸೇರಿ 29 ಬಗೆಯ ಪ್ರಾಣಿಗಳಿರುತ್ತವೆ. ಈ ಮೃಗಾಲಯವನ್ನು ಮುಂದಿನ ಏಪ್ರಿಲ್ ತಿಂಗಳಲ್ಲಿ ತೆರೆಯುವ ನಿರೀಕ್ಷೆ ಇದೆ ಪ್ರೇಕ್ಷಕರು ಕಾರುಗಳಲ್ಲಿ ಸಂಚರಿಸಬಹುದು.

ಆಂಗ್ಲೇಯರಿಂದಲಾದರೂ ಅರಿತುಕೊಳ್ಳಬಾರದೇನು ?

★

ಗೋವಧೆಯನ್ನು ಸರಿಯೆನ್ನುವ ಮತ ಆದಾವುದೂ ಇಲ್ಲವಾದರೂ ಹಿಂಊಗಳನ್ನು ಮತಾಂತರಗೊಳಿಸಿ ತಮ್ಮ ಸಾಮ್ರಾಜ್ಯವನ್ನು ಭದ್ರಪಡಿಸಿಕೊಳ್ಳುವ ಉದ್ದೇಶದಿಂದ ಮಹಮದೀಯರೂ ಕ್ರಿಸ್ತೀಯರೂ ಗೋವಧೆ ನಡೆಸಿರುವರು ; ಈ ವಿಷಯವನ್ನೇ ಆ ಮತಸ್ಥ ಮೇಧಾವಿಗಳು ಸ್ಪಷ್ಟಪಡಿಸುತ್ತಾ ಬಂದಿರುವರು. ಹಾಗಿದ್ದರೂ ನಮ್ಮ ದೇಶದ ಜನರು ಅನ್ಯ ದೇಶಗಳಲ್ಲಿ ನಡೆಯುತ್ತಿರುವದನ್ನು ಅನುಕರಿಸುತ್ತಿರುವದರಲ್ಲದೆ ಈ ಮೇಧಾವಿಗಳ ಮಾತಿಗೆ ಕಿವಿಗೊಡುತ್ತಿರುವುದಿಲ್ಲ. ಐರೋಪ್ಯರಂತೆ ಅಮೇರಿಕನರಂತೆ ನಡೆದುಕೊಳ್ಳುತ್ತಿರುವ ನಮ್ಮ ಓದಿರುವ ಗುಂಪು ಗೋಹತ್ಯೆ ಸರಾಗವಾಗಿ ನಡೆಯಬೇಕೆನ್ನುವ ಅಭಿಪ್ರಾಯವನ್ನು ಹೊಂದಿರುತ್ತದೆ. ಆ ದೇಶಗಳಲ್ಲಿರುವಂತಹ ಕೊಲೆಮನೆಗಳು ಇಲ್ಲೂ ಇರಬೇಕೆಂದೂ ಹೇಳುತ್ತಿದೆ. ಇಂತಹವರ ಕಣ್ಣು ತೆರೆಸುವಂತಹ ಘಟನೆಯೊಂದು ಇಂಗ್ಲೆಂಡಿನಲ್ಲಿ ಸಂಭವಿಸಿರುತ್ತದೆ.

ಇಂಗ್ಲೆಂಡಿನಲ್ಲಿ ಜಸವಂತ ಸಿಂಹ ದಂಪತಿಗಳ ಒಂದು ಸ್ವಂತ ಮನೆ ಇದೆ. ಅದರಲ್ಲಿ ಅವರಿದ್ದು ಇನ್ನೊಂದೆಡೆ ಡಾಕಿನ್ಸ್ ದಂಪತಿಗಳಿರುವರು. ಅವರು ಗೋಮಾಂಸ ಭಕ್ಷಕರಿದ್ದಾರೆ. ಇದನ್ನು ಸಹಿಸಿಕೊಳ್ಳಲಾಗದ ಸಿಂಹ ದಂಪತಿಗಳು ಮನೆ ಖಾಲಿ ಮಾಡುವಂತೆ ಡಾಕಿನ್ಸ್‌ರನ್ನು ಕೇಳಿಕೊಂಡರು : ಅದು ಪ್ರಯೋಜನಕ್ಕೆ ಬಾರದ ಮೇಲೆ ನ್ಯಾಯಾಲಯಕ್ಕೆ ದೂರಿತ್ತರು ; ಮನೆಖಾಲಿಮಾಡಬೇಕೆಂದು ನ್ಯಾಯಾಲಯ ತೀರ್ಪಿತ್ತಿರುತ್ತದೆ. "ಮನೆ ಗೋರಕ್ಷಕರಿಗೆ ಸೇರಿರುವ ಕಾರಣ ಅವರ ಮನಸ್ಸಿಗೆ ನೋವಾಗುವ ಗೋಮಾಂಸ ಭಕ್ಷಣ ಆ ಮನೆಯಲ್ಲಿ ನಡೆಯಕೂಡದೆಂದು ನ್ಯಾಯಾಧೀಶರ ಅಭಿಪ್ರಾಯ

ಮನೆ ಸಿಂಹದಂಪತಿಗಳದ್ದಾದರೂ, ದೇಶ ಬ್ರಿಟಿಷರದ್ದಿದೆ. ಅಲ್ಲಿ ಗೋಮಾಂಸ ಸಾಧಾರಣ ಮಾಂಸ ಇದೆ. ಹಾಗಿದ್ದೂ ನ್ಯಾಯಾಲಯವು ಅಸುಪಾಸಿನವರ ಮತೀಯ ಮನೋಭಾವನೆಗೆ ಧಕ್ಕೆ ಬರಕೂಡದೆನ್ನುವುದಕ್ಕಾಗಿ ಅಲ್ಲಿ ಪಶುಮಾಂಸವನ್ನು ಉಪಯೋಗಿಸೂಡದೆಂದು ಸೂಚಿಸಿರುತ್ತದೆ.

ಇದಕ್ಕೆ ವಿರುದ್ಧವಾಗಿದೆ ನಮ್ಮ ನೆಲೆ ; ಇಲ್ಲಿ ದೇಶವೂ ಗೋರಕ್ಷಕ, ಗೋಪೂಜಕ ಗೋಪಾಲಕರದ್ದಿದೆ, ಅದರ ಹೆತ್ತೆ ನಡೆಯಕೂಡದೆನ್ನುವವರೂ ಅವರೇ. ಹಾಗಿದ್ದೂ ಸರಕಾರವು ಅವರ ಮಾತಿಗೆ ಕಿವಿಗೊಡದೆ ಆಂಗ್ಲೇಯರ್ಥಂತೆ ಗೋಭಕ್ಷಣೆಗೆ ಪ್ರೋತ್ಸಾಹ ಕೊಡುತ್ತಿದೆ ! ಆಂಗ್ಲೇಯರನ್ನು ಅನುಕರಿಸಲು ಪ್ರಯತ್ನಿಸುತ್ತಿರುವ ಬೂದು ಜನರು ಈ ಘಟನೆಯತ್ತ ಗಮನ ಹರಿಸಬೇಕು : ಅವರು ತಮ್ಮ ಮನಸ್ಸನ್ನು ಇನ್ನು ಮೇಲಾದರೂ ಬದಲಾಯಿಸಿಕೊಳ್ಳಲೇಬೇಕು. ಆಗ ಆವರ ಮನೋಪಟಲವೂ ಸ್ವಚ್ಛವಾಗುತ್ತದೆ. ರಾಷ್ಟ್ರೀಯ ಐಕ್ಯಕ್ಕೆ ದಾರಿಯಕಾಗುತ್ತದೆ ; ಸಂಶ್ಲಿಷ್ಟ ಗಾಳಿ ಬೀಸಲ್ಕಾರಂಭಿಸುತ್ತದೆ ; ಶಾಂತಿ ನೆಲೆಸುತ್ತದೆ.

ಗೋಪ್ರೇಮಿಗಳಿಗೆ ವಿಜಯದಶಮಿ ಪ್ರೇರಣೆಯನ್ನೀಯುತ್ತದೆ. ಗೋಹತ್ಯೆ ತಡೆಯಬೇಕಾದಲ್ಲಿ ಸುಸಂಘಟಿತ ಶಕ್ತಿಯ ಆವಶ್ಯಕತೆ ಇದೆ : ಅದಕ್ಕಾಗಿ ಗೋಭಕ್ತರು ಒಂದಾಗಲೇ ಬೇಕು ; ಪ್ರಜಾಪ್ರಭುತ್ವದ ಆಯುಧವನ್ನು ಅದಕ್ಕಾಗಿ ಉಪಯೋಗಿಸಿಕೊಳ್ಳಲೇಬೇಕು : ಆಗ ಸಿಂಹವಾಹನವಾಗುಳ್ಳ ಚಾಮುಂಡೇಶ್ವರಿ, ಮಹಿಷಾಸುರ ಮರ್ಧನಿಯು ಗೋಭಕ್ಷರಲ್ಲಿರುವ ಆಸುರೀ ಶಕ್ತಿಯನ್ನು ನಾಶಮಾಡುವಳು.

— ಶಿವಶಂಕರ

ಗೋ ರ್.....ಬ್ರಾಹ್ಮಣ

ಲೇಖಕ– ಹೊಂಗನೂರು ಆನಂತಕೃಷ್ಣ ಜೋಯಿಸ್

ನಾರಾಯಣ ಜೋಯಿಸರು ತಮ್ಮ ಪ್ರಾತರಾಹ್ನಿಕಗಳನ್ನೆಲ್ಲಾ ತೀರಿಸಿ ಎಂದಿನಂತೆ ದನಗಳ ಕೊಟ್ಟಿಗೆಯತ್ತ ನಡೆದರು ; ವೃದ್ಧಾಪ್ಯದ ಆಶಕ್ತತೆಯಲ್ಲೂ ನಿತ್ಯ ಕರ್ಮಗಳೊಂದನ್ನೂ ಬಿಡದೆ ಗೋಪೂಜೆಯನ್ನೂ ಮಾಡುತ್ತಿದ್ದರು ; ಅರವತ್ತು ಪ್ರಾಯದ ಅವರು ಗೋಪೂಜೆಗಾಗಿಯೇ ಬದುಕಿದ್ದಾರೆ !

ಸುಕ್ಕುಗಟ್ಟಿದ ಚರ್ಮ, ಬೆಳ್ಳಿಯುಂಡಾಗಿರುವ ಕೂದಲು, ನಡುಗುತ್ತಿರುವ ಕೈಕಾಲು, ಕೊಂಚ ಬಗ್ಗಿದ ಸೊಂಟ – ಇದೇ ನಮ್ಮ ಜೋಯಿಸರ ಶಾರೀರದ ಲಕ್ಷಣ ; ಇಂತಹುದರಲ್ಲೂ ಇಪ್ಪತ್ತೈದೂ ದನಗಳಿಗೂ ಪೂಜೆಯಾಗದೆ ಯಾವ ಕಾರ್ಯವನ್ನೂ ಮಾಡುವಂತಿಲ್ಲ. ಪ್ರತಿ ಶನಿವಾರ ಅವಕ್ಕೆ ಸ್ನಾನವೂ ಆಗಬೇಕು. ಇವೆಲ್ಲಾ ಕಾರ್ಯಕ್ಕೂ ನೆರವು ನೀಡುತ್ತಿದ್ದುದು ಅವರ ಧರ್ಮಪತ್ನಿ ವೈದೇಹಿ ಮಗನಿಗಾದರೋ ಇದಾವುದರಲ್ಲೂ ಆಸಕ್ತಿ ಇಲ್ಲ. ಆದೇನೇ ಇರಲಿ ನಾರಾಯಣ ಜೋಯಿಸರು ಮಹತ್ಕಾರ್ಯ ಸಾಧಿಸಿದಷ್ಟರಂತೆ ಗೋಪೂಜೆ ಮುಗಿಸಿ—

' ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣ ಹಿತಾಯಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋನ್ನಮಃ ॥

ಎಂದು ಹೇಳುತ್ತಾ ಒಳ ಬಂದರು. ಪತಿಯನ್ನರಿತು ಸೇವೆ ಸಲ್ಲಿಸುತ್ತಿದ್ದ ಪತಿವ್ರತೆಯಾದ ವೈದೇಹಿ ಅನ್ನಪೂರ್ಣೆಯ ಅವತಾರವೇ ! ಜೋಯಿಸರು ತಮ್ಮ ಮನಕ್ಕಾಗಿರುವ ನೋವುಗಳನ್ನೆಲ್ಲಾ ಮರೆತಿರುವುದು ವೈದೇಹಿಯಿಂದಲೇ ವಿನಹ ಬೇರೆಯಲ್ಲ.

....

ವೈದೀಕ ಮನೆತನದಲ್ಲಿ ಹುಟ್ಟಿದ ಜೋಯಿಸರಿಗೆ ಲೌಕಿಕ ವ್ಯವಹಾರದತ್ತ ಹೊರಳಲಿಲ್ಲ ; ಚಿಕ್ಕಂದಿನಲ್ಲಿಯೇ ಪುರಾಣೇತಿಹಾಸಗಳ ಮನನ ಮಾಡಿದ್ದ ಅವರಲ್ಲಿ ಬ್ರಹ್ಮತೇಜಸ್ಸು ಹೊರಹೊಮ್ಮುತ್ತಿತ್ತು. ಅವರ ತಲೆಗೊಪ್ಪುವ ಶಿಖೆ, ಹಣೆಯಲ್ಲಿ ಹಾಗೂ ಇತರ ಅಂಗಗಳಲ್ಲಿ ದ್ವಾದಶನಾಮಗಳು, ಕಿವಿಯಲ್ಲಿ ಶಂಖ–ಚಕ್ರದ ಕಡಕಗಳು, ಮೇಲುಕೋಟೆಯ ಅಗಲದಂಚಿನ ಕಚ್ಚೆ ಪಂಚೆ, ಸೊಂಟಕ್ಕೆ ಬಿಗಿದ ಧೋತರ, ಇದೇ ಅವರ ವೇಷ.

ಸದಾ ಅವರ ಬಾಯಲ್ಲಿ ಪರಮಾತ್ಮನ ಗುಣಗಾನ : ಭಕ್ತಿರಸ ಗಂಗೆಯಂತೆ ತಾನೇತಾನಾಗಿ ಅವರ ಬಾಯಿಂದ ಉಕ್ಕಿ ಹರಿಯುತ್ತಿತ್ತು ; ಅವರ್ಣ ಗೋಭಕ್ತಿಯಂತೂ ವರ್ಣಿಸಲಸದಳ. ಸಾಮಾನ್ಯ ಜನರಿಗೆ ಗೋವಿನ ಬಗ್ಗೆ ಅವರು ನೀಡುತ್ತಿದ್ದ ಉಪದೇಶವಿಷ್ಟೆ—

" ಧರ್ಮದ ಅಳಿವು, ಉಳಿವು, ಗೋವಿನಿಂದಲೇ ; ಗೋವೇ ಸರ್ವಸ್ವ, ಏಕೆಂದರೆ, ಮೂವತ್ಮೂರು ಕೋಟಿ ದೇವತೆಗಳೂ ಅದರಲ್ಲೆ ವಾಸಿಸುತ್ತಾರೆಂದು ನಮ್ಮ ಧರ್ಮ ಗ್ರಂಥಗಳು ಸಾರುತ್ತವೆ ; ಅದಕ್ಕಾಗಿಯೇ ' ಧರ್ಮ ದೇವತೆ " ಯೆಂದು ಹೆಸರು : ಗೋವು ಎಲ್ಲಿ ಕ್ಷೀಣಿಸುತ್ತದೋ ಅಲ್ಲಿ ಧರ್ಮದ ನಾಶ, ಹಾಗೂ ದೇಶದ ವಿನಾಶ ಖಂಡಿತ ; ಅಂದರೆ ದೇಶದಲ್ಲಿ ಅಧರ್ಮ, ಅನೀತಿಗಳ ಪಾಶವೀಕೃತ್ಯ ನಡೆಯುತ್ತದೆ ಎಂಬುದು ಅಕ್ಷರಶಃ ನಿಜ : ಹಿಂದೂ ಧರ್ಮಕ್ಕೆ ಗೋವೇ ಆಧಾರ ; ಗೋವಿನ ಅಳಿವು ಎಂದೋ ಧರ್ಮದ ಅಳಿವೂ ಅಂದೇ. ". [ಮುಂದುವರಿಯುವುದು

ಈ ಪ್ರಕಾರವಾಗಿ ಪ್ರಾಚೀನ ಭಾರತೀಯ ಶಾಸ್ತ್ರ ಮತ್ತು ಧರ್ಮ ಗ್ರಂಥಗಳು ಗೋಪಾಲನಾ ಮತ್ತು ಗೋರಕ್ಷಣೆಯ ಬಗ್ಗೆ ಹೇಳಿರುವದನ್ನು ನಾವು ನೋಡಬಹುದಾಗಿದೆ. ಭಾರತೀಯ ಜನ ಮಾನಸದಲ್ಲಿ ಸನಾತನವಾದ ಕೂಗೊಂದು ಎದ್ದಿತ್ತು. ಒಂದೂ ಅದೇ ಏಳಬೇಕಾಗಿದೆ, ಅಷ್ಟೇ ಅಲ್ಲ, ದಿಕ್ಕುದಿಕ್ಕುಗಳಲ್ಲಿಯೂ ಮೊಳಗಬೇಕಾಗುತ್ತದೆ—

ಇದೇ ಕೂಗು— ಸರ್ವೇಷಾಮೇವಭೂತಾನಾಂ
ಗಾವಃಶರಣಮುತ್ತಮಮ್ ।
ಯದ್ ಗೃಹೇಮುಖಿತಾಗಾವಃ
ಸಯಾಜೇ ನರಕೇ ನರಃ

ಪ್ರಾಚೀನ ಭಾರತದಲ್ಲಿ ಗೋಸಂವರ್ಧನೆ

ಲೇಖಕರು : ಆನಂತಕೃಷ್ಣ ಜೋಯಿಸ್ — ಆಧಾರ : ಹಿಂದೀ ಗೋರಕ್ಷಣ

(ಮುಂದುವರಿದುದು)

ವರ್ಷಾ, ಶರದ್ ಹೇಮಂತ ಋತುಗಳಲ್ಲಿ ಗೋವುಗಳಿಂದ ಬೆಳಿಗ್ಗೆ ಮತ್ತು ಸಾಯಂಕಾಲ ಹಾಲು ಕರೆಯತಕ್ಕದ್ದು ; ಶಿಶಿರ, ವಸಂತ ಮತ್ತು ಗ್ರೀಷ್ಮ ಋತುಗಳಲ್ಲಿ ಕೇವಲ ಒಂದು ಬಾರಿ ಮಾತ್ರ ಹಾಲು ಕರೆಯತಕ್ಕದ್ದೆಂದು ಸರಕಾರದ ಆಜ್ಞೆಯಾಗಿತ್ತು. ಈ ಆಜ್ಞೆಯ ಉಲ್ಲಂಘನೆಯು ಯಾರಿಂದ ನಡೆದರೂ ಅವರನ್ನು ಶಿಕ್ಷಿಸಲಾಗುತ್ತಿತ್ತು.

ಗೋವಿನ ಹಾಲಿನಿಂದ ದೊರೆಯುವ ತುಪ್ಪಕ್ಕೆ ಮಾತ್ರ ತೆರಿಗೆಯನ್ನು ವಿಧಿಸಲಾಗುತ್ತಿತ್ತು ಮತ್ತು ತುಪ್ಪದ ಹಾಗೂ ಹಾಲಿನ ಶುದ್ಧತೆಗಾಗಿ ಸಾಕಷ್ಟು ತಿಳುವಳಿಕೆ ಕೊಡಲಾಗುತ್ತಿತ್ತು. ಕೌಟಿಲ್ಯನ ಅರ್ಥಶಾಸ್ತ್ರವು ಈ ರೀತಿಯೂ ಹೇಳುತ್ತದೆ— ಏನೆಂದರೆ, ಕೃಷಿಯೋಗ್ಯವಲ್ಲದ ಹುಲ್ಲು ಮಾತ್ರ ಬೆಳೆಯುವ ಭೂಮಿಯನ್ನು ಗೋಮಾಳಕ್ಕಾಗಿ ಬಿಡತಕ್ಕದ್ದು. ಅರ್ಥಶಾಸ್ತ್ರದಲ್ಲಿ ಎತ್ತುಗಳನ್ನು ನೋಡಿಕೊಳ್ಳಲು ಎಂತಹ ನೌಕರನಿರಬೇಕೆಂಬುವರ ಬಗ್ಗೆ ವರ್ಣನೆಯಿದೆ ಗೋ ಅಧ್ಯಕ್ಷನನ್ನು ಇಡೀ

ಭಾರತದ ವನ್ಯಜೀವಿಗಳು

1970 ನೇ ಆಗಸ್ಟ್‌ನಲ್ಲಿ ಭಾರತದವನ್ಯಜೀವ ಮಂಡಲಿಯು ಇತ್ತ ವರದಿಯಲ್ಲಿ, ಭಾರತದ ವನ್ಯಜೀವಿಗಳು ನಾಶವಾಗುವ ಸ್ಥಿತಿ ಒದಗಿದೆ ಎಂದು ತಿಳಿಸಿತ್ತು - ಇವುಗಳ ರಕ್ಷಣೆಗಾಗಿ ಹೊಸ ಶಾಸನಗಳನ್ನು ಜಾರಿಗೆ ತರಲು ಉಪಕ್ರಮಿಸಲಾಗುತ್ತಿದೆ ಎಂದು ಗೊತ್ತಾಗಿದೆ.

Vegetarianism [Times]

●

It is our consolation that the greatest men who ever lived were vegetarians from the Greek philosophers down to our time e g. Edison, Shaw, Gandhi and many more. For humans to be carnivorous is unnatural and simply barbarian. Our gastro-intestinal tract is that of herbivora and frutarians. Beginning with the next century, we heve no choice but to become vegeta ians ; we can no longer be so wasteful as to let the cows feed on five times the land we would need in the direct way for our sustenance.

Frederick W. Beldus
President
San Francisco Vegetarian Society

§ This correspondent in TIMES (7-12-70) says in the future, not remotest future man will have to be totally vegetarian To live on meat is wasting sa much land. One animal requires six bighas of land, and when you are carnivorous, you are wasting so much land, if you are living on vegetable one human being requires not more than two bighas, even less. This intention is quite right. But it does not go far enough A carnivorous person is quick to get into a temper and quick to kill, while a vegetarian is cool is cool in temper and is far less quick to take offence and commit murder. Who knows if the present phase of cruelty deliberate senseless murder in India, in Bengal in particular, is not due to the increased nd increasing preference to animal food The streets of Calcutta 60 years ago could show only 4 or 5 meat shops, there are now at least one hundred And not only are the greatest men in history as the correspondent states vegetarians but the greatest people in the world- Indians are vegetarians on a scale unknown to any one. There is no country in the world which is so highly vegetarian, and where one animal the cow is considered sacred. No one likes to destroy a thing which one cannot create. It is a pity that question of protein and carbohydrate are pressed wrongly into service to defend meat-eating while complete food may be obtained from vegetables reinforced by milk, and still more wrong to ignore the moral character altogether. — Truth

Turning the Wheel of Happiness

DALMIA CEMENT (BHARAT) LIMITED

Dalmiapuram P. O., Tiruchirapalli Distt.
(Tamil Nadu)

Manufacturers of

'ROCKFORT' BRAND

DALMIA Portland Cement

ALSO

Mine-Owners & Suppliers of High Grade Iron Ore for Export

H .O: 4 Scindia House, New Delhi - 1.

ಗಿಡಗಳಿಗೆ ಭಾವಾನುಭವ ಉಂಟೆ ?

ಗಿಡಗಳಿಗೆ ಜ್ಞಾಪಕಶಕ್ತಿ ಇವೆ. ಹೆದರಿಕೆಯಾದಾಗ ಎಲೆಗಳು ನಡುಗುತ್ತವೆ. ಗಿಡಗಳು ಮನುಷ್ಯರ ಮನಸ್ಸು ಕೂಡ ತಿಳಿಯಬಲ್ಲವು. ನೀರು ಹಾಕಿದ ತಕ್ಷಣ ಗಿಡಗಳು ತಮ್ಮ ಚೈತನ್ಯವನ್ನು ಹೊರಪಡಿಸುವುವು. ಒಮ್ಮೆ ನ್ಯೂಯಾರ್ಕಿನ ಕ್ಲೀವ್ ಬ್ಯಾಕ್ಸ್‌ಟರ್ ಎಂಬುವರು ಒಂದುಗಿಡದ ಎಲೆಗಳನ್ನು ಸುಡಲು ಯೋಚಿಸುತ್ತಿದ್ದಂತೆಯೇ ಈ ಗಿಡಕ್ಕೆ ಸ್ಪರ್ಶವಾಗುತ್ತಿದ್ದ ಪಾಲಿಗ್ರಾಫ್ ಉಪಕರಣದ ಪ್ರಕಾರ ಈ ಗಿಡವು ತಕ್ಷಣ ಮೂರ್ಛೆಹೋಯಿತು. ಒಬ್ಬ ಮನುಷ್ಯ ಒಂದು ಗಿಡವನ್ನು ಕಡಿದು ಅದರ ಪಕ್ಕದ ಗಿಡದ ಹತ್ತಿರ ಬಂದ ತಕ್ಷಣ ಆ ಗಿಡವು ಮೂರ್ಛೆಹೋಗುವುದು. ಇದೇ ರೀತಿ ಮೊಟ್ಟೆಗಳು ಕೂಡ ಒಡೆಯಲು ಕೈಗೆ ತೆಗೆದುಕೊಂಡ ತಕ್ಷಣ ಮೂರ್ಛೆ ಹೋಗುವುವು. ಅದರ ಜೊತೆಯಲ್ಲಿರುವ ಇತರ ಮೊಟ್ಟೆಗಳು ನಿರ್ಬಲವಾಗುವವು ವಿಜ್ಞಾನಿಗಳು ಈ ಪ್ರಯೋಗಗಳ ಬಗ್ಗೆ ಚಿಕಿತರಾಗಿದಾರೆ [ವಿ. ಸ. ಸೇ.]

Edited Printedand Published by Dharmapracharanirata M S Krishna Rao (Propretor) at the Satvevad Press Chamarajapuram Mysore

EARN INCREASED RATES OF INTEREST

ON SMALL SAVINGS

Higher interest rates announced by the Central Government are now in force

	Old Rate per annum in percent	New Rate per annum
Post Office Savings Bank		
i) Single, Joint and Provident Fund Accounts	$3\frac{1}{2}$	4
ii) Minimum balance of Rs. 100/- or more throughout the year	4	$4\frac{1}{4}$
iii) Blocked Deposit in multiples of Rs. 100/- for two years.	$4\frac{1}{4}$	$4\frac{1}{2}$
Post Office Time Deposits		
1 Year	$5\frac{1}{2}$	6
3 Year	$6\frac{1}{4}$	7
5 Year	$6\frac{3}{4}$	$7\frac{1}{4}$
Post Office Recurring Deposit	$6\frac{1}{4}$	$6\frac{3}{4}$
7 Year National Savings Certificates (IV Issue)	$7\frac{1}{4}$	$7\frac{1}{2}$

For details please ask your nearest Post Office or write to--

1. The Directorate of Small Savings,
   Finance Department,
   Vidhana Soudha Bangalore - 1

2. The Regional Director,
   National Savings,
   Gandhinagar, Bangalore - 9